

ಮೇಲ್ನೋಟಕ್ಕೆ ಆಭರಣ ಗಟ್ಟಿಯಾಗಿದೆ. ಹಗುರವಾದ ಒಡವೆ ಇದಾಗಿದ್ದು 12ರಿಂದ 14 ಗ್ರಾಂಗಳಲ್ಲಿ ತಯಾರು ಮಾಡಬಹುದು.

### ಮಣಿ ಗುಂಡು ಸರ

ಇದನ್ನು ಬಿಳಿ ನೂಲಿನಲ್ಲಿ ಪೋಣಿಸಿ ಮಾಡಲಾಗುತ್ತದೆ. ಇದು ಹಗುರವಾಗಿದ್ದು ಬಿಳಿ ಮಣಿ (ಫ್ಯಾನ್ಸಿ) ಹಾಗೂ ಕಪ್ಪು ಮಣಿಯಲ್ಲಿ ಮಾಡಬಹುದು. ಜೊತೆಗೆ ಮೆರುಗು ಹೆಚ್ಚಲು ಚಿನ್ನದ ವ್ಯಾಕ್ಸ್ ಹೊಂದಿದ ಗುಂಡುಗಳು ಇವೆ. ವ್ಯಾಕ್ಸ್ ಇದ್ದಲ್ಲಿ ಕೋಲ್ಡ್ ವಾಟರ್ ಪಾಲಿಶ್ ಮಾಡಲಾಗುತ್ತದೆ. ಇದರಲ್ಲಿ ಚಿನ್ನದ ಮಣಿಗಳನ್ನು ಸೇರಿಸಿ 1.5 ಗ್ರಾಂನಿಂದ 20 ಗ್ರಾಂವರೆಗೆ ಒಡವೆ ತಯಾರು ಮಾಡಬಹುದು. ಕಿವಿಯೋಲೆ ಇದಕ್ಕೆ ಹೊಂದಿಕೊಂಡು ಇರಲಿ. ಯಾವಾಗಲೂ ಕೊರಳ ಹಾರ ಮತ್ತು ಕಿವಿಯೋಲೆ ಮ್ಯಾಚಿಂಗ್ ಹಾಕಿ. ಬಳೆ, ಉಂಗುರಗಳನ್ನು ಮ್ಯಾಚ್ ಮಾಡದೇ ಇದ್ದರೂ ತೊಂದರೆ ಇಲ್ಲ. ಮಣಿಗಳು ಬಿಳಿ, ಕೆಂಪು, ನೀಲ, ಹಳದಿ... ಹೀಗೆ ಅವರವರ ಭಾವಕ್ಕೆ ಹೊಂದಿಕೊಂಡು ಕಪ್ಪು ಮಣಿಗಳಿಗೆ ಹೊಂದುಕೊಳ್ಳುವಂತೆ ಪೋಣಿಸಿ ಧರಿಸಬಹುದು.

### ಕಪ್ಪು ಮಣಿಯ ಸರ

ಕಪ್ಪು ಮಣಿ ಎಂದಾಕ್ಷಣ ಕರಿಮಣಿ ಸರ ಎಂದೇ ಭಾವನೆ ಇದೆ. ಆದರೆ ಅದರಲ್ಲೂ ಹಲವು ವಿಧಗಳಿವೆ. ಹಾರಮ್ ಆಗಿಯೂ ಧರಿಸಬಹುದು. ಪೆಂಡೆಂಟ್ ಅಳವಡಿಸಿ (ಆ್ಯಂಟಿಕ್ ಸ್ಟೋನ್ ಪೆಂಡೆಂಟ್) ಧರಿಸಬಹುದು. ಸರ ಎರಡು ಎಳೆ, ಮೂರು ಎಳೆ ಆದಾಗ ಒಂದರ ಮೇಲೊಂದು ನಿಲ್ಲುತ್ತದೆ. ಈ ಸರ ಹಾಗಲ್ಲ ಇದರ ಮಣಿಗಳನ್ನು ಒಂದಕ್ಕೊಂದು ನೂಲಿನಲ್ಲಿ ಹೆಣೆದಂತೆ ಇದ್ದು ಹಿಂದಿನ ಕಾಲದಲ್ಲಿ ಮಹಿಳೆಯರು ಈ ತರವಾಗಿ ಮಣಿಗಳನ್ನು (ಹಕ್ಕಿ, ಪರ್ಸ್, ವಾಲ್ ಹ್ಯಾಂಗಿಂಗ್) ತಯಾರಿಸುತ್ತಿದ್ದರು. ಸರ ಅಗಲವಾಗಿ ಕಾಣುವಂತೆ ಇದ್ದು ಕಡಿಮೆ ಗ್ರಾಂ ಬಳಸಿ ಇದನ್ನು ಸಿದ್ಧಪಡಿಸಬಹುದು. ಭಾರವೂ ಇಲ್ಲದೆ ಕುತ್ತಿಗೆಯಲ್ಲಿ ಒಪ್ಪವಾಗಿ ನಿಲ್ಲುತ್ತದೆ.

ಇಂದಿನ ಯುವತಿಯರಿಗೆ ಆಭರಣ ಡಿಫರೆಂಟ್ ಆಗಿರಬೇಕು, ಹೊಸತಾಗಿರಬೇಕು, ಟ್ರೆಂಡಿಯಾಗಿರಬೇಕು ಎಂಬುದು ಆಸೆ. ನಮ್ಮಲ್ಲಿದ್ದ ಆಭರಣ ಎಲ್ಲಿಯೂ ಇರಬಾರದು. ಹೀಗೆ ಬಹಳ ಕನಸಗಳೂ ಇರುತ್ತವೆ. ಕಾಸ್ಟಿಂಗ್ ಆಭರಣ ಇದಕ್ಕೆ ಹೇಳಿ ಮಾಡಿಸಿದೆ. ಯಾಕೆಂದರೆ ಬೇರೆ ಬೇರೆ ಕಾಸ್ಟಿಂಗ್ ವಿನ್ಯಾಸಗಳು ಒಂದರ ಹಿಂದೆ ಒಂದರಂತೆ ಮೂಡಿ ಬರುತ್ತದೆ. ಕಪ್ಪು ಬಣ್ಣ ಇರುವ ಆಭರಣಗಳು ತುರುಬು ಕಟ್ಟಿ ಡ್ರೆಸ್ ಮಾಡಿದಾಗ ಹೊಂದಿಕೊಳ್ಳುತ್ತದೆ. ಬಿಳಿ, ಪಿಂಕ್, ಕೇಸರಿ ಮೂರು ಬಣ್ಣಕ್ಕೆ ಅದ್ಭುತವಾಗಿ ಕಾಣುತ್ತದೆ. ನೀಲ, ಪಚ್ಚೆ ಡ್ರೆಸ್ ಆದರೆ ಬಿಳಿ ಹರಳಿನ ಕಾಂಬಿನೇಶನ್ ಇರುವ ಆಭರಣ ಧರಿಸಬಹುದು. ಸೀರೆಯ ಬಣ್ಣದ್ದೇ ಹಾಕುವುದಿದ್ದರೆ ಆಭರಣ ಕಾಂಟ್ರಾಸ್ಟ್ ಕೂಡ ಬಳಸಬಹುದು. ■

## ಹಗುರವಾದ ಕರಿಮಣಿ ಸರ

ಈಗ ಲೈಟ್‌ವೈಟ್ ಒಡವೆಗಳದ್ದೇ ಕಾಲ. ಆಭರಣ ಹಗುರವಾಗಿದ್ದಷ್ಟು ತೊಟ್ಟುಕೊಳ್ಳಲು ಅನುಕೂಲ. ಹಲವು ಬಗೆಯ ವಿನ್ಯಾಸವಿರುವ ಕರಿಮಣಿ ಸರ ಧರಿಸುವುದೇ ಹೆಣ್ಣಿಗೆ ಭೂಷಣ. ಮಾಂಗಲ್ಯ ಸರ, ತಾಳಿ ಸರ, ಕಂಠಿ, ಮಂಗಲಸೂತ್ರ ಮುಂತಾದ ಹೆಸರುಗಳಿಂದ ಕರೆಯುವ ಕರಿಮಣಿ ಮದುವೆಯಾದ ಬಳಿಕವಷ್ಟೇ ತೊಟ್ಟುಕೊಳ್ಳುವ ಸಾಂಪ್ರದಾಯಿಕ ಆಭರಣ.

ಇಂದು ಈ ಕರಿಮಣಿ ಸರದಲ್ಲಿ ಹಲವು ಬದಲಾವಣೆಗಳಾಗಿವೆ. ಫ್ಯಾಷನ್ ಗಾಳಿ ಮಾಂಗಲ್ಯ ಸರಕ್ಕೂ ಎಡತಾಕಿದೆ. ಅತ್ಯಂತ ಹಗುರವಾದ ಒಂದೆಳೆ ಕರಿಮಣಿ ಹೆಚ್ಚಿನ ಮಹಿಳೆಯರ ಮೆಚ್ಚು ಕೂಡ ಆಗಿದೆ. ಫ್ಯಾಷನಬಲ್ ಆಗಿರುವ ಕರಿಮಣಿ ಸರ ಕತ್ತಲ್ಲಿ ಮಿಂಚುವುದು ನೋಡಲೂ ಆನಂದ, ಧರಿಸುವವರಿಗೂ ಆರಾಮದಾಯಕ.

ಸಿನಿಮಾ ತಾರೆಯರು, ರೂಪದರ್ಶಿಗಳು ಮಾಂಗಲ್ಯ ಸರವನ್ನು ತಮಗೆ ಬೇಕಾದ, ಇಷ್ಟಬಂದ ರೀತಿಯಲ್ಲಿ ಮಾರ್ಪಾಡು ಮಾಡಿ ಧರಿಸುವುದು ಇಂದಿನ ಟ್ರೆಂಡ್ ಆಗಿದೆ. ತಮ್ಮ ಉಡುಗೆಗೆ ತಕ್ಕ ಹಾಗೆ ಮ್ಯಾಚಿಂಗ್ ಇರುವ ಸ್ಯಾಂಡಲ್ಸ್, ಆ್ಯಕ್ಸೆಸರೀಸ್ ಧರಿಸುವ ನಟಿಯರು ಈ ಕ್ರೇಜ್ ಅನ್ನು ಸಾಮಾನ್ಯ ಮಹಿಳೆಯರೂ ಅನುಕರಿಸುವಂತೆ ಪ್ರೇರೇಪಿಸುತ್ತಿರುವುದು ಕೂಡ ಇತ್ತೀಚಿನ ವಿದ್ಯಮಾನ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಕಡೆಯಲ್ಲಿ ಹೆಚ್ಚಾಗಿ ಚಿನ್ನದ ಎಳೆಗಳ ಮಧ್ಯೆ ಜೀರೊ ಬೀಡ್ಸ್ ಪೋಣಿಸಿ ಮಾಡಿದ ತಾಳಿಸರ ಇರುತ್ತದೆ. ಕೆಲವು ಕಡೆ ಚಿನ್ನದ ಚೈನ್‌ನ ಕೊನೆಯಲ್ಲಿ ಎರಡು ಕರಿಮಣಿ ಹಾಗೂ ತಾಳಿ ಇರುತ್ತದೆ. ಆಧುನಿಕ ಮನೋಭಾವದ ಮಹಿಳೆಯರು ಕರಿಮಣಿ ಸರದ ಜೊತೆಗೆ ತಾಳಿ ಹಾಕುವ ಬದಲಾಗಿ ಫ್ಯಾಷನಬಲ್ ಆಗಿರುವ ಪೆಂಡೆಂಟ್ ಧರಿಸುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಈ ಪೆಂಡೆಂಟ್ ಡೈಮಂಡ್ ಅಥವಾ ಪ್ಲಾಟಿನಂನಿಂದ ಮಾಡಿದ್ದಾದರೆ ಇನ್ನೂ ಹೆಚ್ಚು ಗ್ರ್ಯಾಂಡ್ ಲುಕ್ ಕೊಡುತ್ತದೆ.

ಸಾಂಪ್ರದಾಯಿಕ ಉಡುಗೆಗಳಾದ ಸೀರೆ, ಸಲ್ವಾರ್ ತೊಟ್ಟಾಗ ಧರಿಸುವ ತಾಳಿಸರಕ್ಕೂ ಪ್ಯಾಂಟ್, ಪಲಾಜೊ, ವೆಸ್ಟರ್ನ್ ಔಟ್‌ಫಿಟ್‌ಗೆ ಸರಿಹೊಂದುವಂತಹ ಉಡುಗೆಗಳನ್ನು ತೊಟ್ಟಾಗ ಧರಿಸುವ ಕರಿಮಣಿ ಸರಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಮಾಮೂಲಿ ಕರಿಮಣಿ ಸರಕ್ಕೆ ಕುಂದನ್ ಪದಕ, ಚಿಕ್ಕ ವಜ್ರದ ಪದಕ, ಹೂವಿನ ವಿನ್ಯಾಸ, ನವಿಲಿನ ವಿನ್ಯಾಸವಿರುವ ಬಗೆ ಬಗೆಯ ಪೆಂಡೆಂಟ್‌ಗಳನ್ನು ಆಯ್ಕೆ ಮಾಡಿ ಬಳಸುವುದು ಕೂಡ ಫ್ಯಾಷನಬಲ್ ಆಗಿರುತ್ತದೆ.

■ ಯು.ಎ.